


## ಮಕ್ಕಳ ಬಗ್ಗೆ ಪೋಷಕರಿಗೆ ಪಾಠ

'ಸುಧಾ' ಮಾ.21ರ ಸಂಚಿಕೆಯ ಆರ್.ನಾಗೇಶ್‌ರ ಮುಖಪುಟ ಲೇಖನ 'ಮಕ್ಕಳ ಮಾತು ಮನೇಲಲ್ವೆ?'ಯಲ್ಲಿ ಮಕ್ಕಳ ಬಗ್ಗೆ ಪೋಷಕರು ಅನುಸರಿಸಬೇಕಾದ ಕ್ರಮಗಳ ಕುರಿತು ಉತ್ತಮವಾಗಿ ತಿಳಿ ಹೇಳಲಾಗಿದೆ.

– ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಸ್.ನಿತ್ಯ, ಮೂಡಬಿದಿರೆ/ ಪ್ರೊ.ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ

## ಮಕ್ಕಳಿಗೆ ಅತಿಯಾದ ಭಾವನೆ

ಈಗಿನ ಮಕ್ಕಳಿಗೆ ಭಾವನೆಗಳೇ ಇಲ್ಲವೆಂದು ಹೇಗೆ ಹೇಳುತ್ತೀರಿ? 'ಮಹಾಭಾರತ' ಧಾರಾವಾಹಿ ನೋಡುವಾಗ ಬಾವಿಗೆ ಬೀಳುತ್ತಿದ್ದ ಅಜ್ಜಿಯೊಬ್ಬರನ್ನು ಭೀಮ ರಕ್ಷಿಸುತ್ತಿರುವುದನ್ನು ನೋಡಿದ ನಾಲ್ಕು ವರ್ಷದ ನನ್ನ ಮೊಮ್ಮಗ ಅತ್ತೇ ಬಿಟ್ಟ. ಅದು ಸತ್ಯ ಅಲ್ಲ– ಕತೆ ಮಾತ್ರ ಎಂದು ಎಷ್ಟು ಹೇಳಿದರೂ ಕೇಳಲೊಲ್ಲ. ಈಗಲೂ ನೆನಪಾದರೆ ಅಜ್ಜಿ ನಿಜವಾಗಿ ಬಾವಿಗೆ ಬಿದ್ದರೇ..? ಎಂದು ಕೇಳುತ್ತಾನೆ. ಮಕ್ಕಳನ್ನು ಹೆಚ್ಚು ಭಾವನಾತ್ಮಕವಾಗಿ ಬೆಳೆಸುವುದೂ ಅಪಾಯಕ್ಕೆ ರಹದಾರಿ.

–ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

## ಚಿರಕಾಲ ಉಳಿಯುವ ವಿಚಾರ

ವೈನತೇಯರ 'ಕೃತಿ ಆಕೃತಿ ವಿಕೃತಿ' ಕುರಿತ ವಿಚಾರ ಲಹರಿ ಸೊಗಸಾಗಿತ್ತು. ಇಂದಿನ ಕಾಲದ ಬಗೆಗೆ ತುಲನೆ ಮಾಡುತ್ತಾ ಆಕೃತಿ ಎನ್ನುವುದು ವಿಕೃತಿ ಯಾದರೆ ಹೇಗಿರುತ್ತದೆ ಎನ್ನುವುದನ್ನು ಉಪಮೆ ಗಳೊಂದಿಗೆ ಹೋಲಿಸಿರುವುದು ಸರಿಯಾಗಿತ್ತು. ಈ ತರಹದ ವಿಚಾರ ಲಹರಿಗಳು ಚಿರಕಾಲ ನೆನಪಲ್ಲಿ ಉಳಿದುಬಿಡುತ್ತವೆ.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ದಾರಿದೀಪವಾದ ಮಾತೇ ಮುತ್ತು

'ಮಾತೇ ಮುತ್ತು' ಕತ್ತಲಲ್ಲಿ ನಡೆವವರಿಗೆ ದಾರಿದೀಪ. ಕೆ.ವಿ.ರಂಗನಾಥಾಚಾರ್ ಅವರ ಬರಹ 'ಸರಳ ಮದುವೆಗೆ ಸುಲಭ ಸೂತ್ರಗಳು' ಆಚರಣೆಗೆ ಬಂದರೆ ಒಳ್ಳೆಯದು.

–ಬಳ್ಳಾರಿ ಮಧ್ವರಾಜ್, ಪಿ.ಎನ್.ಶ್ರೀವತ್ಸ, ಬೆಂಗಳೂರು

## ನಾಟಿ ವೈದ್ಯದ ಸೇವೆ

'ಹಿತ್ತಲ ಗಿಡವೇ ಮದ್ದು!'ವಿನಲ್ಲಿ ಚಂದ್ರಹಾಸ ಚಾರ್ಮಾಡಿ ಪರಿಚಯಿಸಿರುವ ಬೊಮ್ಮುಗೌಡ ಅವರ ನಾಟಿವೈದ್ಯ ಸೇವೆ ಮೆಚ್ಚುಗೆಗೆ ಅರ್ಹವಾದುದು.

–ಶ್ಯಾಮಸುಂದರ್, ಬೆಂಗಳೂರು/ ಹಾಡ್ಯ ಜಯಾನಂದ, ಮೈಸೂರು

## ತಜ್ಞರದು ಜಾಣ ಮೌನವೆ?

ನಾಟಿ ವೈದ್ಯವನ್ನು ಹಲವು ಪತ್ರಿಕೆಗಳು ವೈಭವೀಕರಿಸುತ್ತಿವೆ. ಆದರೆ ಸಾಚಾ ಎಷ್ಟು? ನಕಲಿ ಎಷ್ಟು? ಒರೆಗೆ ಹಚ್ಚಿ ನೋಡಬೇಕಾದ ವೈದ್ಯಕೀಯ ಕ್ಷೇತ್ರದ ತಜ್ಞರು ಇತ್ತ ಕಣ್ಣೆತ್ತಿಯೂ ನೋಡದೆ ಮೌನ ವಹಿಸಿದ್ದಾರೆ, ಏಕೆ? ಅವರು ನಿಜ ಸಂಗತಿ ತಿಳಿಸಬೇಕು.

–ನೇ.ಗೋ.ಭ.

## ಗುರುವಿನೊಂದಿಗೆ ಪ್ರಣಯ!

'ಗುರುವಿನೊಂದಿಗೆ ಪ್ರೇಮ!' ಎಂ.ವೇದಾವತಿ ಅವರ ಶಿಕ್ಷಣ ಕುರಿತ ಲೇಖನ ಸಕಾಲಿಕವಾಗಿದೆ.

–ಅಶ್ವಿನಿ ಸಂತೋಷ್, ನೊಣವಿನಕೆರೆ

## ಕುಸ್ತಿ ಪ್ರಿಯರಿಗೆ ಖುಷ್!

'ಮಲ್ಲರ ಜಗದಲ್ಲಿ ತಲ್ಲಣ' ಗಿರೀಶ ದೊಡ್ಡಮನಿ ಅವರ ಬರಹ ಕುಸ್ತಿಪ್ರಿಯರಿಗೆ ಬಹಳ ಹಿಡಿಸಿತು.

–ಎಚ್.ಆನಂದಕುಮಾರ್, ಚಿತ್ರದುರ್ಗ

## ಆಕರ್ಷಕ ಚಿತ್ರಲೇಖನ

ಚಾರಣಿಗರ ಅಚ್ಚುಮೆಚ್ಚಿನ ತಾಣವಾದ ನೆಯ್ಯಾರ್ ಕುರಿತ ಸದಾನಂದ ಪೆರ್ಲರ ಚಿತ್ರಲೇಖನ ಆಕರ್ಷಕ ವಾಗಿತ್ತು.

– ನೆ.ಲ.ರಾಂ, ಬೆಂಗಳೂರು/ ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ

## ಮಾರ್ಮಿಕ ಕಥೆ

ಕೊನೆಯವರೆಗೂ ಕುತೂಹಲ ಕಾಯ್ದುಕೊಂಡ ಕೇಶವರೆಡ್ಡಿ ಹಂದ್ರಾಳರ ಕಥೆ 'ಆತ್ಮಹತ್ಯೆ' ಇಷ್ಟವಾಯಿತು. ಆತ್ಮಸಾಕ್ಷಿಯನ್ನು ವಂಚಿಸಲು ಸಾಧ್ಯವಿಲ್ಲ ಎನ್ನುವುದನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ.

– ಸೌಮ್ಯ, ಬೆಂಗಳೂರು/ಬಿ.ಎಸ್.ಮುಳ್ಳೂರ, ಹಲಗತ್ತಿ/ ಕೆ.ವಿ.ಸೀತಾರಾಮ್ ಬಿಜೈ, ಮಂಗಳೂರು/ ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

## ಹೃದಯ ತಟ್ಟಿದ ಭಾವ

ಡಾ.ವಿನಯ ಶ್ರೀನಿವಾಸ್ ಅವರ 'ಬನ್ನಿ ಭಾವಗಳೆ ಬನ್ನಿ ನನ್ನೆಡೆಗೆ...' ಹೃದಯ ತಟ್ಟಿತು.

–ಬಿ.ಎಸ್.ಚಂದ್ರಶೇಖರ್, ಬೆಂಗಳೂರು/ ವಿಭಾ ಮುರಳೀಧರ್, ತುಮಕೂರು

## ರುಚಿ ರುಚಿ ಸೂಪ್!

'ಸೂಪ್ ಕುಡಿಯಿರಿ' ಕೆ.ಎಸ್.ಶಾರದಾ ಶೇಖರ್ ಬರಹ ಓದಿ ಸೂಪ್ ಕುಡಿದಷ್ಟೇ ಖುಷಿಯಾಯಿತು. .

–ರವೀಂದ್ರನಾಥ ಯಡಹಳ್ಳಿ, ಬೀಳಗಿ

## 'ಸುಧಾ' ತಂದ ಹೆಮ್ಮೆ, ಸಂತಸ

ಎರಡು ವರ್ಷಗಳ ಹಿಂದೆ ನನ್ನ 'ಮಿಲನ' ಕಾದಂಬರಿ 'ಸುಧಾ'ದಲ್ಲಿ 14ವಾರಗಳ ಕಾಲ ಧಾರಾವಾಹಿಯಾಗಿ ಪ್ರಕಟವಾಯಿತು. ಆಗ 'ಸುಧಾ' ಪರಿಚಯವಿರದ ನನ್ನ ತವರೂರು ರಾಮದುರ್ಗದ ನಮ್ಮ ನೇಕಾರ ಓಣಿಯ ಸಂಬಂಧಿಕರಿಗೆ 'ಸುಧಾ' ಕೊಂಡುಕೊಳ್ಳಲು ತಿಳಿಸಿದ್ದೆ.

ಇತ್ತೀಚೆಗೆ ನಾನು ತವರೂರು ರಾಮದುರ್ಗಕ್ಕೆ ಹೋದಾಗ ಅವರಲ್ಲಿ 8–10 ಮನೆಗಳಲ್ಲಿ ಈಗಲೂ 'ಸುಧಾ' ಓದುಗರಾಗಿ ಮುಂದುವರಿದಿರುವುದು ಕಂಡು ಬಂತು. ನನ್ನ ಕಾದಂಬರಿ ಮುಗಿದಾಗ ಅವರೂ 'ಸುಧಾ' ಓದುವುದನ್ನು ನಿಲ್ಲಿಸಿರಬಹುದೆಂದು ತಿಳಿದಿದ್ದೆ. ಆದರೆ 'ಸುಧಾ' ಚೆನ್ನಾಗಿ ಬರುತ್ತಿರುವುದರಿಂದ ಮುಂದುವರಿ ಸಿದ್ದೇವೆ ಎಂದು ಕೇಳಿ ನನ್ನ ಮೆಚ್ಚಿನ 'ಸುಧಾ' ಪತ್ರಿಕೆ ಬಗ್ಗೆ ಹೆಮ್ಮೆ ಹಾಗೂ ಸಂತೋಷ ಮೂಡಿಬಂತು.

–ಪಾರ್ವತಿ ಪಿಟಗಿ, ಸುಳೇಭಾವಿ

## ಕಾವ್ಯಾನಂದ ಪ್ರಶಸ್ತಿಗೆ ಕೃತಿ ಆಹ್ವಾನ

2012ರಲ್ಲಿ ಪ್ರಕಟವಾದ 'ವಚನ ಸಾಹಿತ್ಯ ವಿಮರ್ಶೆ– ವೈಚಾರಿಕ ದೃಷ್ಟಿ'ಗೆ ಸಂಬಂಧಿಸಿದ ಕೃತಿಗೆ ಕಾವ್ಯಾನಂದ ಪುರಸ್ಕಾರ ನೀಡಲು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ನಿರ್ಧರಿಸಿದೆ.

ಪ್ರತಿವರ್ಷ ವಿಭಿನ್ನ ಪ್ರಕಾರಕ್ಕೆ ನೀಡುವ ಈ ಪ್ರಶಸ್ತಿಗೆ 25 ಸಾವಿರ ರೂ. ನಗದು ನೀಡಲಾಗುವುದು. ಆಸಕ್ತರು ತಮ್ಮ ಕೃತಿಗಳನ್ನು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಶ್ರೀ ಗಿರಿ, 4/5 ಎ.ಅಲಿ ಅಸ್ಕರ್ ರಸ್ತೆ, ಬೆಂಗಳೂರು– 560052 – ಈ ವಿಳಾಸಕ್ಕೆ 2013ರ ಜುಲೈ 31ರ ಒಳಗಾಗಿ ಕಳಿಸಿ ಕೊಡಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 080–22264361


# ಮದ್ಯಸೇವನೆ ಹೇಗೆ ಬಿಡುವುದು

**ವ್ಯಸನಿಯ ಅರಿವಿಗೆ ಬಾರದಂತೆ ನಮ್ಮ ಔಷಧಿ ನೀಡುವ ಮೂಲಕ ನಿಮ್ಮ ಮನೆಯಲ್ಲಿ ತತ್‌ಕ್ಷಣದಲ್ಲಿ ಸಂತಸ ಮರಳಿ ಬರುತ್ತದೆ. ವೇಳೆ: 10 ರಿಂದ ಅಪರಾಹ್ನ 2 ರವರೆಗೆ**

♦ **ಹುಬ್ಬಳ್ಳಿ:** ಪ್ರತಿ ತಿಂಗಳು 6 ಮತ್ತು 20 ರಂದು ಹೋಟೆಲ್ ವಿಪ್ರೋ ಲಾಡ್ಜ್, ಲ್ಯಾಮಿಂಗ್ಟನ್ ರೋಡ್. ♦ **ಶಿವಮೊಗ್ಗ:** 6 ಮತ್ತು 20 ರಂದು ಹೊಟೇಲ್ ನವರತ್ನ ಸವನ್ ಲೈನ್ ರೋಡ್ ♦ **ಶಿರ್ಸಿ:** 12 ಮತ್ತು 26ರಂದು ಸಾಮ್ರಾಟ್ ಗೆಸ್ಟ್ ಹೌಸ್, ಯಲ್ಲಾಪುರ ರಸ್ತೆ, ♦**ಗೋವಾ ಮಾರ್ಗೋವಾ:** ದಿನಾಂಕ: 7 ಮತ್ತು 21, ಗ್ರೀನ್ ವ್ಯೂ ಹೋಟೆಲ್, ನ್ಯೂ ಓಲ್ಡ್ ರೈಲ್ವೆ ಸ್ಟೇಷನ್. ಫೋನ್: 9273102091 ♦ **ಬೆಳಗಾವಿ:** 9 ಮತ್ತು 23ರಂದು ಹೊಟೇಲ್ ಗೋಕುಲ್, ಖಡೇ ಬಜಾರ್ ♦ **ಕಾರವಾರ:** 9 ಮತ್ತು 23 ರಂದು ಹೊಟೇಲ್ ನವತಾರ, ಕ್ಯಾಕಿಣಿ ರಸ್ತೆ, ಗೀತಾಂಜಲಿ ಟಾಕೀಸ್ ಎದುರು ♦ **ಬಿಜಾಪುರ:** 14 ಮತ್ತು 28 ರಂದು ಹೊಟೇಲ್ ಸಂತೋಷ್, ಬಸ್‌ಸ್ಟ್ಯಾಂಡ್ ಎದುರು ♦ **ಬಾಗಲಕೋಟ್:** 10 ಆರಾಧನಾ ಡಿಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಎದುರು, ಎಂ.ಬಿ.ರೋಡ್ ♦ **ಕೋಲಾರ:** ಪ್ರತಿ ತಿಂಗಳು 1 ಮತ್ತು 15, ಸುಧಾ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಎದುರು. ಎಂ.ಬಿ.ರಸ್ತೆ, ♦ **ತುಮಕೂರು:** 2 ಮತ್ತು 16, ಹೊಟೇಲ್ ವುಡ್‌ಲ್ಯಾಂಡ್ಸ್, ಬಸ್‌ಸ್ಟ್ಯಾಂಡ್ ಹತ್ತಿರ ♦ **ಬೆಂಗಳೂರು:** 3 ಮತ್ತು 17 ರಂದು ಹೊಟೇಲ್ ಅನ್‌ಮೋಲ್, ಶೇಷಾದ್ರಿ ರೋಡ್, ಸಿಟಿ ರೈಲ್ವೆ ಸ್ಟೇಶನ್ ಬಳಿ, 10 ಮತ್ತು 24 ರಂದು ಸಿಟಿಜನ್ ಲಾಡ್ಜ್, ಬೌರಿಂಗ್ ಹಾಸ್ಪಿಟಲ್ ಎದುರು, ಲೇಡಿ ಕರ್ಝನ್ ರೋಡ್. ♦ **ಮೈಸೂರು:** 4 ಮತ್ತು 18 ರಂದು ಹೊಟೇಲ್ ಕಾನಿಷ್ಕ ಲಾಡ್ಜಿಂಗ್, ಹೆಡ್ ಪೋಸ್ಟ್ ಆಫೀಸಿನ ಹತ್ತಿರ, ಇರ್ವಿನ್ ರೋಡ್. ♦ **ಹಾಸನ:** 5 ಮತ್ತು 19 ರಂದು ವೈಷ್ಣವಿ ಲಾಡ್ಜಿಂಗ್, ಹರ್ಷ ಮಹಲ್ ರೋಡ್. ♦ **ಚಾಮರಾಜನಗರ:** 2 ಮತ್ತು 16ರಂದು ಸಿಎಚ್‌ಆರ್ ಪ್ಲಾಜಾ ಕಾಂಪ್ಲೆಕ್ಸ್, ಸರಕಾರಿ ಆಸ್ಪತ್ರೆ ಎದುರು. ♦ **ಮಂಡ್ಯ:** 12 ಮತ್ತು 26 ಹೊಟೇಲ್ ಸುಖಸಾಗರ್, ಬಸ್‌ಸ್ಟ್ಯಾಂಡ್ ಎದುರು. ♦ **ಗುಲ್ಬರ್ಗಾ:** ಪ್ರತೀ ತಿಂಗಳು ದಿನಾಂಕ 1 ಮತ್ತು 15 ರಂದು ಹೊಟೇಲ್ ಪ್ರಶಾಂತ್, ಸ್ಟೇಶನ್‌ರೋಡ್. ♦ **ರಾಯಚೂರು:** 2 ಮತ್ತು 16, ಹೊಟೇಲ್ ಅಶೋಕ ♦ **ಹುಮ್ನಾಬಾದ್:** 12 ಮತ್ತು 26 ರಂದು ಸಂಗಮೇಶ್ವರ ಲಾಡ್ಜ್ ಬಸ್‌ಸ್ಟ್ಯಾಂಡ್ ಹತ್ತಿರ, ♦ **ಬೀದರ್:** 13 ಮತ್ತು 27, ಹೊಟೇಲ್ ಮಯೂರ, ಹೊಸ ಬಸ್‌ಸ್ಟ್ಯಾಂಡ್ ಎದುರು. ♦ **ಸಿಂಧನೂರು:** 14 ಮತ್ತು 28, ಶ್ರೀರಾಮ್ ಶುಕಮುನಿ ಲಾಡ್ಜ್, ಬಸ್‌ಸ್ಟ್ಯಾಂಡ್ ಹತ್ತಿರ. ♦ **ಮಂಗಳೂರು:** ಪ್ರತಿ ತಿಂಗಳು 5 ಮತ್ತು 19, ಹೊಟೇಲ್ ಆದರ್ಶ ಲಾಡ್ಜ್, ಮಾರ್ಕೆಟ್ ರೋಡ್. ♦ **ದಾವಣಗೆರೆ:** 7 ಮತ್ತು 21, ಜನತಾ ಡಿಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಎದುರು. ♦ **ಉಡುಪಿ:** 10 ಮತ್ತು 24, ವ್ಯವಹಾರ್ ಲಾಡ್ಜ್, ಕನಕದಾಸ ರೋಡ್, ಶ್ರೀ ಕೃಷ್ಣ ದೇವಸ್ಥಾನದ ಎದುರು. ♦ **ಚನ್ನಪಟ್ಟಣ:** 11 ಮತ್ತು 25, ಹೊಟೇಲ್ ಆನಂದ್ ವಿಹಾರ್, ವಿಶ್ವಪ್ರೇಮಿ ಸಮಾರಂಭ ಭವನ. ♦ **ಗದಗ:** 5 ಮತ್ತು 19, ಆನಂದ ಲಾಡ್ಜ್, ಸ್ಟೇಷನ್ ರೋಡ್, ಮಹೇಂದರ್‌ಕರ್ ವೃತ್ತ. ♦ **ಹಾವೇರಿ:** 4 ಮತ್ತು 18, ಕಾವೇರಿ ಲಾಡ್ಜ್, ಪಿ.ಬಿ.ರೋಡ್. ♦ **ಬಳ್ಳಾರಿ:** 13 ಮತ್ತು 27, ಟೂರಿಸ್ಟ್ ಲಾಡ್ಜ್, ರಾಯಲ್ ಸರ್ಕಲ್. ♦ **ಚಿಕ್ಕಮಗಳೂರು:** 12 ಮತ್ತು 26 ಪ್ರಕಾಶ್ ಲಾಡ್ಜ್, ಬಸ್‌ಸ್ಟ್ಯಾಂಡ್ ಎದುರು. ♦ **ದಾಂಡೇಲಿ:** 3 ಮತ್ತು 17, ಸ್ಟೇಟ್ ಲಾಡ್ಜ್, ಬಸ್‌ಸ್ಟ್ಯಾಂಡ್ ಹತ್ತಿರ. ♦ **ಚಿಕ್ಕಬಳ್ಳಾಪುರ:** 8 ಮತ್ತು 22, ಹೊಟೇಲ್ ಸೌಮ್ಯ ಲಾಡ್ಜ್, ಎಲ್‌ಐಸಿ ಆಫೀಸ್ ಎದುರು. ♦ **ಕೆ.ಜಿ.ಎಫ್:** 7 ಮತ್ತು 21, ಸೋನಿ ಲಾಡ್ಜ್, ಒಲಂಪಿಯಾ ಥಿಯೇಟರ್ ಎದುರು. ♦ **ಕುಮಟ:** 11 ಮತ್ತು 25 ಸಲ್ಮಾನ್ ಲಾಡ್ಜ್ (ಕಾಮತ್ ಹೊಟೇಲ್). ♦ **ಹೊಸಪೇಟೆ:** 12 ಪುಷ್ಪಕ್ ಲಾಡ್ಜ್, ಬಸ್‌ಸ್ಟ್ಯಾಂಡ್ ಹತ್ತಿರ. ♦ **ಗಂಗಾವತಿ:** 13, ಅಮರ್ ಲಾಡ್ಜ್, ಬಸ್‌ಸ್ಟ್ಯಾಂಡ್ ರೋಡ್. ♦ **ಗೋಣಿ ಕೊಪ್ಪಲು:** 1 ಮತ್ತು 15 ಹೊಟೇಲ್ ನಂದನವನ. ♦ **ಕುಶಾಲನಗರ:** 3 ಮತ್ತು 17 ಕಲಘಟ್ ಲಾಡ್ಜ್. ♦ **ಕೊಳ್ಳೆಗಾಲ:** 6 ಮತ್ತು 20 ಪ್ರಶಾಂತ್ ಲಾಡ್ಜ್. ♦ **ಮಡಿಕೇರಿ:** 11 ಮತ್ತು 25, ಕಾವೇರಿ ಹೊಟೇಲ್, ಸ್ಕೂಲ್ ರೋಡ್, ಕೂರ್ಗ್ ಜಿಲ್ಲೆ. ♦ **ಪಿರಿಯಾಪಟ್ಟಣ:** 1 ಮತ್ತು 15, ಶ್ರೀವಾಸವಿ ಲಾಡ್ಜ್, ಬಿ.ಎಮ್.ರೋಡ್. ♦ **ವಿರಾಜಪೇಟೆ:** 3 ಮತ್ತು 17, ಗೋಲ್ಡ್ ಕಾಯಿನ್ ಟೂರಿಸ್ಟ್ ಹೋಮ್, ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಹತ್ತಿರ. ♦ **ಬೆಂಗಳೂರು: ಫೋ:080–65625098.**

**ರಾಮ್‌ಬಾಣ್ ಔಷಧಿ**
**ಅಸ್ತಮಾ ಮತ್ತು ಕೀಲು ನೋವಿಗೆ**

ಡಾ|| ಎಂ.ಎಸ್.ಸೇಥಿ